ಕಥೆಯನ್ನು ಓದಿ ಅನೇಕರಿಗೆ ಅದು ನನ್ನದೇ ಕಥೆ ಎಂದು ಹೇಳಿದ್ದೆ. ಮೊದಲಿಗೇ ಬೇರೆಯವರ ಕಥೆಯನ್ನು ಬದಲಿಸಿ ಹೇಳಬೇಕು ಎಂಬ ಹಂಬಲ ನನ್ನ ಬಾಲ್ಯಕಾಲದಿಂದಲೂ ಇತ್ತು. ಆದರೆ, ನಾನು ಬರೆದ ಕಥೆಯನ್ನು ಇನ್ನೊಮ್ಮೆ ತಿದ್ದಿ ಬರೆಯಬೇಕು ಎಂದಾಗ ನಾನು ಸೋಲುತ್ತಿದ್ದೆ. ಈಗಲೂ ಅಷ್ಟೇ... ನಾನು ಒಮ್ಮೆ ಬರೆದ ಕಥೆ ಅಲ್ಲಿಗೆ ಮುಗಿಯಿತು... ನಾನು ಓದಿದ ಶ್ರೇಷ್ಠ ಕಥೆಗಳನ್ನು ಬದಲಿಸಿ ಆ ಕಥೆಗಳನ್ನು ನನ್ನೊಳಗಿರುವ ಪುನರ್‌ಸೃಷ್ಟಿಸಬೇಕು ಎನಿಸಿದೆ. ಕಥೆಗಳ ಸೃಷ್ಟಿಕ್ರಿಯೆ ಸಂಕೀರ್ಣವಾದುದು. ಅದು ನಕಲಾಗದಂತೆ ಪುನರ್‌ಜನ್ಮಿಸುವ ಒಂದು ಸಾಧ್ಯತೆ ಅವರವರ ನುಡಿಯ ಸಂಸ್ಕಾರದಲ್ಲಿ ಸಾಧ್ಯವಿರುತ್ತದೆ. ಹೀಗಾಗಿಯೇ ನನ್ನ ಕಥೆಗಳು ಯಾವುದೊ ಒಂದು ಕೇರಿಯ ದಲಿತರ ನಿವೇದನೆಯಾಗದೆ ಲೋಕದ ಸುಖ ದುಃಖವೂ ಆದದ್ದು. ಇವೆಲ್ಲವೂ ತಿದ್ದುಪಡಿಯ ಸಂಗತಿಗಳಲ್ಲ.

ನನ್ನ ಕಥೆಗಳು ಕಥಾ ಪರಂಪರೆಯಲ್ಲಿ ಉಳಿದು ಇತಿಹಾಸ ಆಗಬೇಕು ಎಂಬ ಯಾವ ಭ್ರಮೆಯೂ ನನಗಿಲ್ಲ. ನನ್ನ ಒಂದೊಂದು ಕಥೆಗಳೂ ಒಂದೊಂದು ನಿಟ್ಟುಸಿರು; ಒಂದೊಂದು ಮಾನವತ್ವದ ದಾಸ; ದಮನಿತರ ಅದೇ ಹಪಹಪಿಸುವ ವಿಪರ್ಯಾಸ; ಮನುಷ್ಯತ್ವದ ಕನಸಿನ ನಿರೂಪಣೆ. ಬೇಕಾದವರಿಗೆ ಇವು ಬೇಕಾಗಬಹುದು; ಬೇಡವಾದವರಿಗೆ ಬೇಡವೆನಿಸಬಹುದು. ನಾನು ಬರೆದ ಕಥೆಗಳು ನನ್ನ ಜನಾಂಗದ ನಿಟ್ಟುಸಿರು ಅಷ್ಟೇ... ನನ್ನ ತಬ್ಬಲಿತನದ ಏಕಾಂತ ರಾತ್ರಿಗಳ ತಾರೆಗಳ ಬೆಳದಿಂಗಳು ಅಷ್ಟೇ... ಅವು ಬಂಡಾಯದ ಕಿಡಿ ಅಲ್ಲ; ದಲಿತ ಕೇರಿಗಳ ಯಃಕಶ್ಚಿತ್ ದೀಪಗಳಲ್ಲ... ಮಾನವರ ಪೂರ್ವಿಕರ ಭಾವಗಳ ನಾಗರಿಕತೆಯ ಘನತೆಯಲ್ಲಿ ಹೇಗೆ ಎಲ್ಲ ಬಗೆಯ ಹಿಂಸೆ, ಅಪಮಾನ, ಅನ್ಯಾಯಗಳನ್ನು ಸಹಿಸಿಕೊಂಡವು ಎಂಬುದರ ನಿರೂಪಣೆಯ ವಿನಮ್ರತೆಯೇ ನನ್ನ ಕಥನ.

ನನ್ನ ಕಥೆಗಳಿಗೆ ಮಿತಿ ಇರಬಹುದು; ಆದರೆ ಆ ಕಥೆಗಳ ತತ್ವಪೂರ್ಣಕರಿಗೆ, ನನ್ನ ಇವತ್ತಿನ ಹಳ್ಳಿಯ ಜನಗಳಿಗೆ ಮಿತಿಗಳಿಲ್ಲ. ಅವರ ಸಂಕಷ್ಟವ ಗ್ರಹಿಸುವ, ಧ್ಯಾನಿಸುವ, ಬರೆವ ಕ್ರಮದಲ್ಲಿ ನನ್ನ ಲೋಪ ಇರಬಹುದು. ಆದರೂ, ನಾನು ಶೋಷಣೆಯ ಜಾಡಿನ ಒಂದು ಎರಕರಿಂದ ಕಥೆ ಬರೆಯಲಿಲ್ಲ. ಇತ್ತೀಚಿನ ನನ್ನ 'ದೇವರ ದಾರಿ' ಕಥಾ ಸಂಕಲನದಲ್ಲೂ ಕೂಡ ಶೋಷಕರೂ, ಅದಕ್ಕೆ ಈಡಾಗಿ ನಲುಗುವವರೂ ಒಟ್ಟಿಗೇ ದಾರಿ ಹುಡುಕುವ ಕಥೆಗಳನ್ನು ಬರೆದಿರುವೆ. ಚರಿತ್ರೆ ಬರೆಯುವವರು ನಾವೇ ಆಗದಿದ್ದರೆ ಈ ಕತೆಗಳು ಎಲ್ಲಿ ನಿಲ್ಲುತ್ತವೆ ಎಂದು ಹೇಳಬಹುದಿತ್ತು. ಹಾಗೆ ನೋಡಿದರೆ, ನನ್ನ ಕಥೆಗಳು ಆ ಕ್ಷಣದ ಆನಂದ; ಆ ಗಳಿಗೆಯ ದುಃಖ, ಆ ಹೊತ್ತಿನ ವಿಮುಕ್ತಿ; ಆ ಕಾಲದ ನಿರೂಪಣೆಯ ಉತ್ಕಟತೆಯ ಒಂದು ಕತ್ತಲ ರಾತ್ರಿಯ ಹಣತೆ, ಅದಕ್ಕಿಂತ ಹೆಚ್ಚಿಗೆ ನನಗೇನೂ ಬೇಡ. ಜಾತಿ ಶಾಪದ ಸಮಾಜದಿಂದ ಹುಟ್ಟಿದ ನನ್ನ ಕಥೆಗಳು ಜಾತ್ಯತೀತ ಚಿಲುಮೆಯಿಂದಲೇ ಹರಿದು ಬಂದವು. ಓದುಗರೇ ಅವುಗಳ ಇತಿಮಿತಿಗಳನ್ನು ತಿಳಿಸಬೇಕು.

ಸೃಜನಶೀಲತೆಯ ಬೇರುಗಳೇ ಕಥನ ಭಾಷೆಯ ಭಾವದ ಬುಡಗಳು. ಪ್ರಾದೇಶಿಕತೆಯ ಬಂಡವಾಳವೂ ಒಂದು ಮಿತಿ. ಬಾಲ್ಯಕಾಲದ ಕೌಟುಂಬಿಕ, ಜಾತಿಕ ನಿರೂಪಣೆಗಳೂ ಕೂಡ ಒಂದು ಮಿತಿ ಇರಬಹುದು. ಪಂಪ ಮಹಾಕವಿ ತನ್ನ ಬಾಲ್ಯಕಾಲದ ಪ್ರಾದೇಶಿಕತೆಯಲ್ಲೇ ಬರೆದಿದ್ದಿದೆ. ಭಿನ್ನ ಕಾಲಮಾನ, ಸಾಮಾಜಿಕ ವ್ಯವಸ್ಥೆಗೆ ತಕ್ಕಂತೆ ಕಥೆಗಳು ಹುಟ್ಟುತ್ತವೆ. ಅಂತಹ ಕಥೆಗಳು ಅದೇ ಒಂದು ಕಾಲದ ಯಶಸ್ವಿ ಕಥೆಗಾರರಿಂದಲೇ ಕಟ್ಟಿ ಬರಬೇಕು ಎಂದೇನಿಲ್ಲ. ಪ್ರಾದೇಶಿಕ ನುಡಿಗಟ್ಟಲ್ಲಿ ಬರೆವ ಒಂದು ಬಗೆಯ ಫ್ಯಾಷನ್ ಈಗ ಮುಗಿದಿದೆ. ಅದರ ಬಂಡವಾಳದ ಲೇಖಕರು ತಪ್ಪೇನ್ನೇನು ಮಾಡಿಲ್ಲ. ಆದರಿಂದ ಒಳಿತೇ ಆಗಿದೆ. ವಿಭಿನ್ನ ವಸ್ತುವನ್ನು ಮೈದುಂಬಲು ಸೃಜನಶೀಲತೆಗೆ